# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1022 |
| ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 21.09.2021. |
| ಉತ್ತರಿಸುವವರು | : | ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಾಂಪ್ರದಾಯಿಕ ಸ್ಥಳೀಯ ಆಟಿಕೆ ತಯಾರಕರನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಆಟಿಕೆ ತಯಾರಿಕೆಯಲ್ಲಿ ಪ್ರಸಿದ್ದಿ ಹೊಂದಿರುವ ರಾಮನಗರ ಜಿಲ್ಲೆಯ ಚನ್ನಪಟ್ಟಣದಲ್ಲಿ ಚನ್ನಪಟ್ಟಣ ಕ್ರಾಫ್ಟ್ ಪಾರ್ಕ್ ನಿರ್ಮಿಸಿ ಚನ್ನಪಟ್ಟಣ ಆಟಿಕೆಗಳ ತಯಾರಕರನ್ನು ಉತ್ತೇಜಿಸಲಾಗುತ್ತಿದೆ. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಈಗಾಗಲೇ ಚನ್ನಪಟ್ಟಣದಲ್ಲಿ ಕಲಾಸಂಕೀರ್ಣದಲ್ಲಿ ಸಾಮಾನ್ಯ ಸೌಲಭ್ಯ ಕೇಂದ್ರವನ್ನು ಸ್ಥಾಪಿಸಿದ್ದು ನೋಂದಾಯಿತ ಕುಶಲಕರ್ಮಿಗಳಿಗೆ 254 ವಸತಿ ಮತ್ತು ಕಾರ್ಯಾಗಾರಗಳನ್ನು ಹಂಚಿಕೆ ಮಾಡಿರುತ್ತದೆ. ನಿಗಮವು ಅಭಿವೃದ್ಧಿ ಆಯುಕ್ತರು (ಕರ ಕುಶಲ) ಜವಳಿ ಮಂತ್ರಾಲಯ ಕೇಂದ್ರ ಸರ್ಕಾರ, ನವದೆಹಲಿಯವರ ಸಹಯೋಗದೊಂದಿಗೆ ಕಾಲಕಾಲಕ್ಕೆ ವಿನ್ಯಾಸ ಮತ್ತು ತರಬೇತಿ ಕಾರ್ಯಾಗಾರವನ್ನು ಆಯೋಜಿಸುತ್ತಿದೆ. ಕುಶಲಕರ್ಮಿಗಳಿಂದ ಖರೀದಿಸಿ ಕಾವೇರಿ ಮಾರಾಟ ಮಳಿಗೆಗಳ ಮುಖಾಂತರ ವ್ಯಾಪಾರ ವಹಿವಾಟು ನಡೆಸುತ್ತಿದೆ. ರಾಜ್ಯದಲ್ಲಿ ಆಟಿಕೆ ತಯಾರಕರನ್ನು ಒಳಗೊಂಡಂತೆ ಕರಕುಶಲಕಲೆಯನ್ನು ಉತ್ತೇಜಿಸಲು ಭಾರತ ಸರ್ಕಾರದ ಸ್ಫೂರ್ತಿ (SFURTI) ಯೋಜನೆಯಡಿ ಶೇ.90 ರ ವರೆಗೆ ಅನುದಾನ ನೀಡಲಾಗುತ್ತಿದೆ. ಕರ್ನಾಟಕ ಕೈಗಾರಿಕಾ ನೀತಿ 2020-25 ರಡಿ 1) ಶೇ.4 ರ ಬಡ್ಡಿಯಲ್ಲಿ ಬ್ಯಾಂಕಿನಿಂದ ಸಾಲ ಪಡೆಯಲು ಅನುವಾಗುವಂತೆ ಬಡ್ಡಿ ಸಹಾಯಧನವನ್ನು ಕುಶಲಕರ್ಮಿಗಳು ಪಡೆಯಬಹುದು, 2)ಶೇ.10 ರಂತೆ ಮಾರುಕಟ್ಟೆ ಅಭಿವೃದ್ಧಿ ಸಹಾಯಧನವನ್ನು ಕುಶಲಕರ್ಮಿಗಳು ಪಡೆಯಬಹುದು. 3)ಕರಕುಶಲ ಕಲೆಯ ಕ್ಲಸ್ಟರ್‌ಗಳಲ್ಲಿ ಯಂತ್ರೋಪಕರಣ/ ಉಪಕರಣಗಳಿಗಾಗಿ ಶೇ.75 ರಷ್ಟು ಅನುದಾನವನ್ನು ಪಡೆಯಬಹುದು. ಇವುಗಳಲ್ಲದೇ ಸಾಮಾನ್ಯ ಕೈಗಾರಿಕೆಗಳು ಕೈಗಾರಿಕಾ ನೀತಿ 2020-25 ರಡಿ ಪಡೆಯಬಹುದಾದ ಎಲ್ಲಾ ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ಆಟಿಕೆ ತಯಾರಕರು ಸಹ ಪಡೆಯಬಹುದಾಗಿದೆ. |
| ಆ) | ಸಾಂಪ್ರದಾಯಿಕ ಆಟಿಕೆಗಳಿಗೆ ಹೊಸ ಮಾರುಕಟ್ಟೆ ಸೃಷ್ಟಿಸಲು ಸರ್ಕಾರ ಯೋಜಿಸುತ್ತಿದೆಯೇ; ಹಾಗಿದ್ದಲ್ಲಿ ವಿವರಗಳೇನು; | ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತವು Cauveryhandicrafts.net ಮೂಲಕ ಹಾಗೂ Amazon ಹಾಗೂ Flipkart ನೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು ಆನ್ ಲೈನ್ ಮೂಲಕ ನಿಗಮವು ವ್ಯಾಪಾರ ವಹಿವಾಟು ನಡೆಸುವ ಮೂಲಕ ಮಾರುಕಟ್ಟೆಯನ್ನು ಒದಗಿಸಿದೆ. |

| | | |
|---|---|---|
| ಇ) | ಜಾಗತಿಕ ಮಟ್ಟದಲ್ಲಿ ಸಾಂಪ್ರದಾಯಿಕ ಆಟಿಕೆಗಳನ್ನು ಸ್ಪರ್ಧಾತ್ಮಕವಾಗಿಸಲು ಹೊಸ ಮಾದರಿಗಳ ನಾವೀನ್ಯತೆ ಮತ್ತು ಹಣಕಾಸು ಸಹಾಯಧನ ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಅಭಿವೃದ್ದಿ ಆಯುಕ್ತರು (ಕರಕುಶಲ) ಜವಳಿ ಮಂತ್ರಾಲಯ ಕೇಂದ್ರ ಸರ್ಕಾರ, ನವದೆಹಲಿಯವರ ಸಹಯೋಗದೊಂದಿಗೆ ಕಾಲಕಾಲಕ್ಕೆ ವಿನ್ಯಾಸ ಮತ್ತು ತರಬೇತಿ ಕಾರ್ಯಾಗಾರವನ್ನು ಆಯೋಜಿಸುತ್ತಿದೆ. ಕಾವೇರಿ ಮಾರಾಟ ಮಳಿಗೆಗಳ ಮುಖಾಂತರ ವ್ಯಾಪಾರ ವಹಿವಾಟು ನಡೆಸುತ್ತಿದೆ. ರಾಜ್ಯ ಹಾಗೂ ದೇಶಗಳಲ್ಲಿ ಮತ್ತು ಹೊರ ದೇಶಗಳಲ್ಲಿ ನಡೆಸುವ ವಸ್ತು ಪ್ರದರ್ಶನ ಮತ್ತು ಮಾರಾಟದಲ್ಲಿ ಪಾಲ್ಗೊಳ್ಳಲು ನಿಗಮ ಹಾಗು ಕುಶಲಕರ್ಮಿಗಳು ಭಾಗವಹಿಸಲು ಉತ್ತೇಜಿಸಿದೆ.<br>ಮೇಲಿನ ಕ್ರಮ ಸಂಖ್ಯೆ (ಅ) ರಲ್ಲಿ ವಿವರಿಸಿರುವ ಯೋಜನೆಗಳಡಿ ಹಣಕಾಸು ಸಹಾಯಧನ ಪಡೆಯಬಹುದಾಗಿದೆ. |

ಸಿಐ **146** ಸಿಎಸ್‌ಸಿ **2021**

(ಎನ್. ನಾಗರಾಜು (ಎಂ.ಟಿ.ಬಿ))
ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ
ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು.